ಆ) ಹೌದು

ಇ) ಕರ್ನಾಟಕದಲ್ಲಿಯೂ ಸಹ ಎಣ್ಣೆ ಬೆಲೆ ಇಳಿಮುಖವಾಗಿದೆ.

ಜಿಲ್ಲಾ ಪರಿಷತ್ತುಗಳಿಗೆ ಕುಡಿಯುವ ನೀರಿನ ಬಗ್ಗೆ ಹೆಚ್ಚುವರಿ ಅನುದಾನ.

1634 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ ಗಳಿಗೆ ರೂ. 25,000 ಹೆಚ್ಚುವರಿ ಅನುದಾನ ಅಭಾವ ಪೀಡಿತ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಕೊಡಲು ಆದೇಶ ನೀಡಿದೆಯೇ?

ಆ) ಹಾಗಿದ್ದಲ್ಲಿ ರಾಜ್ಯ ಜಿಲ್ಲಾ ಪರಿಷತ್ತುಗಳಿಂದ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿಕೊಟ್ಟಿದ್ದಾರೆಯೇ

ಇ) ದಯವಿಟ್ಟು ಜಿಲ್ಲಾವಾರು ಹಂಚಿಕೆಯ ಮೊತ್ತದ ವಿವರಗಳು ಕೊಡುವುದು ಮತ್ತು ಸರ್ಕಾರಕ್ಕೆ ಪ್ರಸ್ತಾವನೆಗಳು ಯಾವಾಗ ಬಂದಿರುತ್ತೆ.

ಈ) ಸರ್ಕಾರದಿಂದ ಇದರ ಬಗ್ಗೆ ಹಣವನ್ನು ಬಿಡುಗಡೆ ಮಾಡಿದೆಯೇ ದಯವಿಟ್ಟು ತಿಳಿಸಿ (ವಿವರಣೆಗಳನ್ನು ಕೊಡುವುದು).

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಅಧ್ಯಕ್ಷರು : ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ತಾಲ್ಲೂಕಿನ ಚೌಂತಾರು ಹಾಗೂ ಹಂದಾಡಿ ಗ್ರಾಮಸ್ಥರ ಮೇಲೆ ಮಂಡಲ ಪಂಚಾಯತಿಯವರು ಅತಿರೇಕದ ಮನೆ ತೆರಿಗೆಯನ್ನು ವಿಧಿಸಿರುವ ಬಗ್ಗೆ ಅರ್ಜಿಯನ್ನು ಈ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

RULING BY THE CHAIR

1988ನೇ ಸಾಲಿನಲ್ಲಿ ನಡೆದ ರಾಜ್ಯಸಭಾ ಚುನಾವಣೆಯ ಸಂದರ್ಭದಲ್ಲಿ ಶಾಸಕರುಗಳಾಗಿದ್ದ ಶ್ರೀ ಅಡ್ಯಂತಾಯ ಹಾಗೂ ಶ್ರೀ ಬಿ.ಎ. ಉಮರಬ್ಬ ಅವರಿಗೆ ಡಾ : ಜೀವರಾಜ್ ಆಳ್ವ ಅವರು ಲಂಚ ನೀಡಿದರೆನ್ನಲಾದ ಒಂದು ಲಕ್ಷದ ಐವತ್ತು ಸಾವಿರ (ರೂ. 1,50,000-00) ರೂಪಾಯಿಗಳನ್ನು ಅಂದಿನ ಸಭಾಧ್ಯಕ್ಷ ಮಾನ್ಯ ಶ್ರೀ ಬಿ.ಜಿ. ಬಣಕಾರ್ ಅವರಿಗೆ ವಿರೋಧಪಕ್ಷದ ನಾಯಕಿಯಾಗಿದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ತನಿಖೆಗಾಗಿ ಒಪ್ಪಿಸಿದ್ದರು. ಈ ಹಣವನ್ನು ವಿಧಾನಸೌಧದಲ್ಲಿರುವ ಅಪೆಕ್ಸ್‌ಬ್ಯಾಂಕಿನ 8252ನೇ ನಂಬರಿನ ಉಳಿತಾಯ ಲೆಕ್ಕ ಖಾತೆಯಲ್ಲಿ ಇಡಲಾಗಿದೆ. ಇದಕ್ಕೆ ಮಾರ್ಚ್ 14, 1991ಕ್ಕೆ 22,160-00 ರೂಪಾಯಿ ಬಡ್ಡಿ ಬಂದಿದ್ದು ಈಗ ಈ ಲೆಕ್ಕದಲ್ಲಿ ರೂಪಾಯಿ 1,72,160-00 ಪೈಸೆ ಇದೆ. ತನಿಖೆಗಾಗಿ ನೇಮಿಸಲಾಗಿದ್ದ